# MIDH ಯೋಜನೆಯ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಉಪ ಯೋಜನೆಯಡಿಯಲ್ಲಿ ಸಸ್ಯಾಗಾರಗಳ ಸ್ಥಾಪನೆಗೆ ಸಹಾಯಧನ ಮಂಜೂರು ಮಾಡುವ ಬಗ್ಗೆ ಮಾರ್ಗಸೂಚಿ

## ಸಂಕ್ಷಿಪ್ತ ಪರಿಚಯ ಮತ್ತು ಮುಖ್ಯಾಂಶಗಳು :

MIDH ಯೋಜನೆಯ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಉಪ ಯೋಜನೆಯಡಿ, ಪ್ರದೇಶ ವಿಸ್ತರಣೆ ಕಾರ್ಯಕ್ರಮದಲ್ಲಿ ರೈತರಿಗೆ ಉತ್ತಮ ಗುಣಮಟ್ಟದ ಕಸಿ / ಸಸಿ ಗಿಡಗಳನ್ನು (Good quality planting materials) ಒದಗಿಸುವುದು ಅತಿ ಮುಖ್ಯವಾಗಿರುತ್ತದೆ. ಈ ರೀತಿಯ ಉತ್ತಮ ಗುಣಮಟ್ಟದ ಕಸಿ/ ಸಸಿ ಗಿಡಗಳನ್ನು ಉತ್ಪಾದನೆ ಮಾಡಲು ಅಗತ್ಯ ಸಂಖ್ಯೆಯ ಸಸ್ಯಾಗಾರಗಳನ್ನು ಪ್ರಾರಂಭಿಸಬೇಕಾಗಿದೆ. ಈ ರೀತಿ ಪ್ರಾರಂಭಿಸುವ ಸಸ್ಯಾಗಾರಗಳಲ್ಲಿ ಅವಶ್ಯಕವಾಗಿ ಬೇಕಾಗುವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿ ಸಹಾಯಧನ ಮಂಜೂರು ಮಾಡುವ ಅವಕಾಶವಿದೆ.

1. **ಕಾರ್ಯಕ್ರಮದ ವಿವರ:**

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಸಾರ್ವಜನಿಕ ಮತ್ತು ಖಾಸಗಿ ವಲಯದಲ್ಲಿ ಮಾದರಿ ಮತ್ತು ಸಣ್ಣ ಸಸ್ಯಾಗಾರಗಳನ್ನು ನಿರ್ಮಾಣ ಮಾಡಲು ಹಾಗೂ ಈ ಸಸ್ಯಾಗಾರಗಳಲ್ಲಿ ಅವಶ್ಯಕವಾಗಿ ಬೇಕಾಗುವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸಹಾಯಧನವನ್ನು ನೀಡಲಾಗುವುದು. ಈ ಕಾರ್ಯಕ್ರಮವು ಪ್ರಸ್ತಾವನೆ ಆಧಾರಿತ ಕಾರ್ಯಕ್ರಮವಾಗಿದ್ದು (Project based), ಖಾಸಗಿ ವಲಯದಲ್ಲಿ Credit linked back ended subsidy ಆಗಿರುತ್ತದೆ. ಘಟಕದ ನಿರ್ಮಾಣಕ್ಕೆ RBI ಅನುಮೋದಿತ online banking (IFSC code, RTGS, NEFT ಇತರೆ) ಸೌಲಭ್ಯವನ್ನು ಹೊಂದಿರುವ ಬ್ಯಾಂಕಿನಿಂದ ಸಾಲ ಪಡೆಯುವುದು ಕಡ್ಡಾಯವಾಗಿರುತ್ತದೆ. ಸಾಲ ಪಡೆದಿರುವ ಕುರಿತು, ಮಂಜೂರಾತಿ ಪತ್ರ ಹಾಗೂ appraisal letter ನೀಡುವುದು. ಸದರಿ ಕಾರ್ಯಕ್ರಮವು "credit Linked back ended subsidy" ಆಗಿದ್ದು ದೀರ್ಘಾವಧಿ ಸಾಲ (Term Loan) ಮಂಜೂರಾಗಿರಬೇಕು. ಅಗ್ರಿಇನ್ಫ್ರಾಸ್ಟ್ರಕ್ಚರ್ ಫಂಡ್ ಯೋಜನೆಯಡಿ 200 ಲಕ್ಷಗಳವರೆಗಿನ ಸಾಲಕ್ಕೆ ಶೇ.3 ರ ಬಡ್ಡಿಯ ಕಡಿತವಿದ್ದು, ಫಲಾನುಭವಿಗಳಿಗೆ ಈ ಸವಲತ್ತನ್ನು ಪಡೆಯಲು ಮಾಹಿತಿ ನೀಡಿ ನೆರವಾಗುವುದು.

- **ಮಾದರಿ ಸಸ್ಯಾಗಾರ : (ಕನಿಷ್ಠ 4 ಹೆಕ್ಟೇರ್‌ವರೆಗೆ)**

| ವಲಯ | ಘಟಕದ ಒಟ್ಟು ವೆಚ್ಚ | ಸಹಾಯಧನದ ಮೊತ್ತ |
|---|---|---|
| ಸಾರ್ವಜನಿಕ ವಲಯ | ಪ್ರತಿ ಹೆ. Rs. 25.00 ಲಕ್ಷದಂತೆ<br>4.ಹೆ .ಗೆ ಗರಿಷ್ಠ ರೂ.100.00 ಲಕ್ಷ | ಶೇ.100 ರಷ್ಟು ಗರಿಷ್ಠ ರೂ.100.00 ಲಕ್ಷ |
| ಖಾಸಗಿ ವಲಯ | ಪ್ರತಿ ಹೆ. Rs.25.00 ಲಕ್ಷದಂತೆ<br>4.ಹೆ .ಗೆ ಗರಿಷ್ಠ ರೂ.100.00 ಲಕ್ಷ | ಶೇ. 40 ರಷ್ಟು ಗರಿಷ್ಠ ರೂ.40.00 ಲಕ್ಷ |

229

## ಸಣ್ಣ ಸಸ್ಯಾಗಾರ : (ಕನಿಷ್ಠ 1 ಹೆಕ್ಟೇರ್)

| ವಲಯ | ಘಟಕದ ಒಟ್ಟು ವೆಚ್ಚ | ಸಹಾಯಧನದ ವಿವರ |
|---|---|---|
| ಸಾರ್ವಜನಿಕ ವಲಯ | ರೂ.15.00 ಲಕ್ಷ ಪ್ರತಿ ಹೆ.ಗೆ | ಶೇ.100 ರಷ್ಟು ಗರಿಷ್ಠ ರೂ.15.00 ಲಕ್ಷ |
| ಖಾಸಗಿ ವಲಯ | ರೂ.15.00 ಲಕ್ಷ ಪ್ರತಿ ಹೆ.ಗೆ | ಶೇ.50 ರಷ್ಟು ಗರಿಷ್ಠ ರೂ.7.50 ಲಕ್ಷ |

## ತಾಂತ್ರಿಕ ವೈಶಿಷ್ಟತೆ:

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿ ಭಾರತ ಸರ್ಕಾರದ ಮಾರ್ಗಸೂಚಿಯನ್ವಯ (As per MIDH(NHM), GOI guidelines & cost norms) ಸಸ್ಯಾಗಾರದಲ್ಲಿ ಕೆಳಕಂಡ ಮೂಲಭೂತ ಸೌಕರ್ಯಗಳನ್ನು ಒಳಗೊಂಡಿರಬೇಕು.

i) Proper fencing to mother plants block
ತಾಯಿ ಗಿಡಗಳ ತಾಕಿಗೆ ಬೇಲಿ ಹಾಕಬೇಕು.

ii) Scion / Mother block of improved varieties.
ಉತ್ತಮ ತಳಿಗಳ ತಾಯಿಗಿಡಗಳ ತಾಕು ನಿರ್ವಹಣೆ

iii) Raising root stock seedlings under net house conditions.
ನೆಟ್ ಹೌಸ್ ವಾತಾವರಣದಲ್ಲಿ ತಾಯಿಗಿಡಗಳನ್ನು ಬೆಳೆಸುವುದು.

iv) Creation of Irrigation facilities, pump house to provide sufficient irrigation to the plants and water storage tank to meet at least 2 days requirement for the proposals.
ಕನಿಷ್ಠ ಎರಡು ದಿನಗಳಿಗೆ ನೀರಾವರಿಯ ಅಗತ್ಯತೆಯನ್ನು ಪೂರೈಸಲು ನೀರಿನ ಮೂಲ, ನೀರು ಸಂಗ್ರಹಣಾ ತೊಟ್ಟಿ ಮತ್ತು ಪಂಪ್ ಮನೆ.

v) Mother plants block maintenance under poly cover to protect from adverse weather conditions.
ಹವಾಮಾನದ ವೈಪರೀತ್ಯದಿಂದ ರಕ್ಷಿಸುವುದಕ್ಕೆ ತಾಯಿ ಗಿಡಗಳನ್ನು ಪಾಲಿಮನೆಯಲ್ಲಿ ನಿರ್ವಹಿಸುವುದು.

vi) Propagation house, tubular polyhouse with ventilation having insect proof netting on sides and fogging and sprinkler irrigation system. (For propagation).

ಸಸ್ಯಾಭಿವೃದ್ಧಿ ಮನೆ, ಉತ್ತಮ ಗಾಳಿ ಸಂಚಾರವಿರುವ ಕೀಟ ನಿರೋಧಕ ಬಲೆಯುಳ್ಳ, ಮಂಜು ಹಾಗೂ ತುಂತುರು ನೀರಾವರಿ ಸೌಲಭ್ಯವುಳ್ಳ ಪಾಲಿಮನೆ.

vii) Hardening/ maintenance in insect proof net house with light screening properties and sprinkler irrigation system. (For maintenance of plants)
ತುಂತುರು ನೀರಾವರಿವುಳ್ಳ ಕೀಟ ನಿರೋಧಕ ಮನೆಯಲ್ಲಿ ಸಸ್ಯಾಭಿವೃದ್ಧಿಪಡಿಸಿದ ಗಿಡಗಳ ನಿರ್ವಹಣೆ.

viii) Soil sterilization facilites - steam sterilization system with boilers.
ಮಣ್ಣು ರೋಗಾಣು ರಹಿತವಾಗಿಡಲು ಸೌಲಭ್ಯಗಳು - ಬಾಯ್ಲರ್‌ನ್ನು ಬಳಸಿ ಆವಿಯ ಸಹಾಯದಿಂದ ಗಿಡಗಳನ್ನು ರೋಗಾಣು ರಹಿತವಾಗಿಡುವ ಪದ್ಧತಿ ಅಳವಡಿಸಬೇಕು.

**Indicative cost for the establishment of Model nursery on 4.00 ha area**

(Rs. In lakhs)

| | Particulars | No / Quantity /Area | Admissible Indicative Project Cost |
|---|---|---|---|
| 1. | Land development (Leveling, digging of pits, filling etc.)(Detailed cost estimate to be furnished). | | 1.50 |
| 2 | Fencing if required (to be calculated as per schedule of rates of Department of Horticulture) | | 4.00 |
| 3 | Development of Progeny block (Mother Plants)with drip irrigation and sprinklers (Name of the crops proposed, variety, number of plants in each crop / variety, source of procurement, cost of the plant and planting in mother block) have to be furnished. | | 6.00 |
| 4 | Digging of bore well, purchase of Submersible pump, electrification, Irrigation infrastructure and pump house (Cost breakup of each item to be given separately) | | 6.20 |
| 5 | Construction of Water Storage Tank (Plan and estimate from the authorized person to be given). | | 2.50 |
| 6 | Green house / mist chamber (Rs. 844/- per sq.mt. as per NHM cost norms & guidelines) Rs. 3500/- /sqm | 2000 to 4000 sqm | 32.60 |
| 7 | Construction of Shade house (Rs. 710/- per sq.mt. as | 2000 sq.mt | 14.20 |

| | | | |
|---|---|---|---|
| | per NHM cost norms & guidelines) | | |
| 8 | Vermi compost (30'x4'x2') 2 pits (As per NHM cost norms & guidelines) | | 1.00 |
| 9 | Garden equipments (Sprayers, Wheel barrows, trolleys – and any other tools specific to nursery activities. (Details of tools and cost breakup to be furnished). | | 1.00 |
| 10 | Display board for mother plants and propagation block | | 0.40 |
| 11 | Store Room (minimum 54 sqm on prorata basis) Plan and estimate from the Govt., / Registered Engineer to be given. | | 4.00 |
| 12 | Soil sterilization – steam sterilization system with boilers | | 5.00 |
| 13 | Water Harvesting Structures (1200 cu.mt) (as per NHM cost norms and guidelines) with 300 micron lining | | 1.50 |
| 14 | Working shed (minimum 50 sqm on prorata basis) (Plan and estimate from the Govt., / Registered Engineer to be given). | | 2.00 |
| | **Optional** | | |
| 15 | Hardening / maintenance in insect proof net house with light screening properties and drip / sprinkler irrigation system (for maintaining Mother Plants) | | 10.00 |
| 16 | Power machine (upto 20 HP), tractors, tillers etc.,(If subsidy already availed under NHM, this component cannot be considered) | | 3.00 |
| 17 | Bag filling machine (sieving, mixing, bag filing) | | 4.00 |
| 18 | Virus indexing facility for Apple and Citrus | | 1.10 |
| | | **Total** | **100.00** |

ಮೇಲಿನ ಐಟಂವಾರು ದರಗಳು, ಅಂದಾಜು ಮೊತ್ತವಾಗಿದ್ದು, ಒಟ್ಟಾರೆ ಎಲ್ಲಾ ಐಟಂಗಳ ಒಟ್ಟು ಮೊತ್ತ ರೂ.100.00 ಲಕ್ಷಗಳಿಗೆ ಸೀಮಿತಗೊಳಿಸಿ, ನರ್ಸರಿಯ ವಿಸ್ತೀರ್ಣದ ಆಧಾರದ ಮೇಲೆ (on prorata basis) ಸಹಾಯಧನದ ಮಿತಿಯನ್ನು ನಿರ್ಧರಿಸಬೇಕು.

**Indicative cost for the establishment of Small nursery on 1.00 ha. Area**

(Rs. in lakhs)

| Sl. No. | Particulars | Admissible Indicative project Cost |
|---|---|---|
| 1 | Land Preparation (Levelling, digging of pits, filling etc.) Detailed cost estimate to be furnished. | 0.50 |
| 2 | Fencing if required (to be calculated as per schedule of rates of Department of Horticulture) | 1.00 |
| 3 | Development of Progeny block (Mother Plants) with drip irrigation and sprinklers(Name of the crops proposed, variety, number of plants in each crop / variety, source of procurement, cost of the plant and planting in mother block) have to be furnished. | 1.50 |
| 4 | Construction of Water Storage Tank (Plan and estimate from the authorized person to be given) or Water Harvesting Structures(1200 cu.mt) (as per NHM cost norms and guidelines) | 1.60 |
| 5 | Green house / mist chamber – 500 sqm (Rs. 890/- per sq.mt. as per NHM cost norms) | 4.45 |
| 6 | Construction of Shade net house (Tubular structure) – 200 sqm (Rs. 710 per sq.mt. as per NHM cost norms) | 1.42 |
| 7 | Vermi Compost (30'x4'x2') 1 pit / Bio digestor unit (30'x8'x2.5') (As per NHM Cost norms & guidelines) | 0.50 |
| 8 | Store Room (minimum 7 sqm on prorata basis) (Plan and estimate from the Govt., / Registered Engineer to be given). | 1.00 |
| 9 | Tools / implements (Sprayers, Wheel barrows, trolleys and any other tools specific to nursery activities. (Details of tools and cost breakup). | 0.50 |
| 10 | Display board for mother plants and propagation block with NHM Logo | 0.13 |
| 11 | Digging of bore well, purchase of Submersible pump, electrification, Irrigation infrastructure and Pump House (Cost breakup of each item to be given separately) | 2.40 |

225

| | Total | 15.00 |
|---|---|---|

ಮೇಲಿನ ಐಟಂವಾರು ದರಗಳು, ಅಂದಾಜು ಮೊತ್ತವಾಗಿದ್ದು, ಒಟ್ಟಾರೆ ಎಲ್ಲಾ ಐಟಂಗಳ ಒಟ್ಟು ಮೊತ್ತ ರೂ.15.00 ಲಕ್ಷಗಳಿಗೆ ಸೀಮಿತಗೊಳಿಸಿ, ನರ್ಸರಿಯ ವಿಸ್ತೀರ್ಣದ ಆಧಾರದ ಮೇಲೆ (on prorata basis) ಸಹಾಯಧನದ ಮಿತಿಯನ್ನು ನಿರ್ಧರಿಸಬೇಕು.

2. **ಸಹಾಯಧನ ಪಡೆಯಲು ಇರಬೇಕಾದ ಅರ್ಹತೆ:**

- ಫಲಾನುಭವಿಗಳು ರೈತರಾಗಿದ್ದು ಜಮೀನು ಅವರ ಹೆಸರಿನಲ್ಲಿರಬೇಕು. ಜಂಟಿ ಖಾತೆಯಾಗಿದ್ದಲ್ಲಿ ಇತರೆ ಖಾತೆದಾರರ ಒಪ್ಪಿಗೆ ಪತ್ರವನ್ನು ಪಡೆದಿದ್ದು ನೋಟರಿರವರಿಂದ ನೋಂದಣಿಯಾಗಿರಬೇಕು. ತಂದೆ ಅಥವಾ ತಾಯಿ ಹೆಸರಿನಲ್ಲಿ ಜಮೀನಿದ್ದು, ಅವರು ಮರಣ ಹೊಂದಿದ್ದಲ್ಲಿ ಮಾತ್ರ ಗ್ರಾಮ ಲೆಕ್ಕಿಗರಿಂದ ದೃಢೀಕರಿಸಿ ಕುಟುಂಬದ ಇತರೆ ಸದಸ್ಯರಿಂದ ಒಪ್ಪಿಗೆಯನ್ನು ಪಡೆದು ತಮ್ಮ ಹೆಸರಿನಲ್ಲಿ ಅರ್ಜಿ ಸಲ್ಲಿಸುವುದು.
- ಮಹಿಳೆಯ ಹೆಸರಿನಲ್ಲಿ ಜಮೀನಿನ ಖಾತೆ ಹೊಂದಿದ್ದು, ಕುಟುಂಬದ ಇತರೆ ಪುರುಷ ಸದಸ್ಯರ ಹೆಸರಿನಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಯಾವುದೇ ಕಾರಣಕ್ಕೂ ಮಾನ್ಯ ಮಾಡಬಾರದು.
- ಮಹಿಳೆಯರ ಹೆಸರಿನಲ್ಲಿಯೇ ಅರ್ಜಿ ಸಲ್ಲಿಸುವುದನ್ನು ಉತ್ತೇಜಿಸಬೇಕು.
- ಫಲಾನುಭವಿಗಳು ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ರೈತರಾಗಿರಬೇಕು ಅಥವಾ ತೋಟಗಾರಿಕೆ ಬೆಳೆ ಬೆಳೆಯುವ ಆಸಕ್ತಿಯನ್ನು ಹೊಂದಿರಬೇಕು.
- ಮಾದರಿ ನರ್ಸರಿ ನಿರ್ಮಿಸುವ ಫಲಾನುಭವಿಯು ಕನಿಷ್ಠ 4 ಹೆಕ್ಟೇರ್ ಜಮೀನು ಹಾಗೂ ಹಾಗೂ ಸಣ್ಣ ನರ್ಸರಿ ನಿರ್ಮಿಸುವ ಫಲಾನುಭವಿಯು ಕನಿಷ್ಠ 1 ಹೆಕ್ಟೇರ್ ಜಮೀನನ್ನು ಅವರ ಹೆಸರಿನಲ್ಲಿ ಹೊಂದಿರಬೇಕು ಹಾಗೂ ಇತ್ತೀಚಿನ ಪಹಣಿಯನ್ನು ಲಗತ್ತಿಸಿರಬೇಕು.
- ಕನಿಷ್ಠ 10 ಜನ ನುರಿತ ಕಾರ್ಮಿಕರನ್ನು (ತೋಟಗಾರಿಕೆಯಲ್ಲಿ ಪರಿಣತಿ ಹೊಂದಿದವರು) ನೇಮಿಸಿಕೊಳ್ಳಬೇಕು.
- ಶಕ್ತಿಚಾಲಿತ ಯಂತ್ರಗಳನ್ನು ಐಚ್ಛಿಕವಾಗಿ ಪರಿಗಣಿಸುವುದು.
- ಪ್ರಸ್ತುತ ಇಲಾಖೆ ನಿಗಧಿಪಡಿಸಿರುವ ದರಗಳಿಗನುಗುಣವಾಗಿ ಕಸಿ ಗಿಡಗಳ ಮಾರಾಟ ದರವನ್ನು ನಿಗಧಿಗೊಳಿಸುವುದು.

3. **ಅರ್ಜಿ ಸಲ್ಲಿಸುವ ವಿಧಾನ, ಅರ್ಜಿ ಪರಿಶೀಲನೆ ಮತ್ತು ಫಲಾನುಭವಿಗಳ ಆಯ್ಕೆ :-**

- ಆಯಾ ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರು NHM ಯೋಜನೆಯ ಮಾರ್ಗಸೂಚಿ ಪ್ರಕಾರ ಅರ್ಹ ರೈತರಿಂದ ಅರ್ಜಿಗಳನ್ನು ಆಹ್ವಾನಿಸಲು ಜಿಲ್ಲೆಗೆ ನಿಗಧಿಪಡಿಸಿರುವ ಗುರಿಯ ಮಿತಿಯಲ್ಲಿ ಪ್ರಕಟಣೆಯನ್ನು ಸ್ಥಳೀಯ ಪತ್ರಿಕೆಗಳು, ವಿವಿಧ ಮಾಧ್ಯಮಗಳ ಮುಖಾಂತರವಾಗಿ ಹಾಗೂ ಜಿಲ್ಲೆಯ ಎಲ್ಲಾ ಕಛೇರಿ ಸೂಚನಾ ಫಲಕದಲ್ಲಿ ಪ್ರದರ್ಶಿಸುವ ಮೂಲಕ ಹೆಚ್ಚಿನ ಪ್ರಚಾರ ನೀಡಿ ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸುವುದು.
- ಪ್ರಕಟಣೆಯಲ್ಲಿ ಕಡ್ಡಾಯವಾಗಿ ಫಲಾನುಭವಿಗಳ ಅರ್ಹತೆ, ಆಯ್ಕೆಯ ಮಾನದಂಡಗಳು, ಸಲ್ಲಿಸಬೇಕಾದ ದಾಖಲಾತಿಗಳನ್ನು, ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ, ಜಿಲ್ಲೆಗೆ ನಿಗಧಿಪಡಿಸಿದ ಗುರಿ ಮತ್ತು

ನಿಗಧಿಪಡಿಸಿದ ಗುರಿಗಿಂತ ಹೆಚ್ಚಿನ ಅರ್ಜಿಗಳು ಸ್ವೀಕರಿಸಿದಲ್ಲಿ ಅನುಸರಿಸುವ ವಿಧಾನದ ಬಗ್ಗೆ ಸ್ಪಷ್ಟವಾಗಿ ಮಾಹಿತಿ ಇರತಕ್ಕದು.

- **ರೈತರು ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಅರ್ಜಿಗಳ ಅಂತಿಮ ಪಟ್ಟಿ ಮಾಡಿ ಮೊದಲು ಅರ್ಜಿ ಸಲ್ಲಿಸಿದವರಿಗೆ ಆದ್ಯತೆ ನೀಡುವುದು.**
- ತೋಟಗಾರಿಕೆ ಉಪ ನಿರ್ದೇಶಕರು ಸಸ್ಯಾಗಾರದ ಪ್ರಸ್ತಾವನೆಯನ್ನು ಜಿಲ್ಲಾ ಸಮಿತಿಯ ಗಮನಕ್ಕೆ ತರುವುದು ಅಥವಾ ಜಿಲ್ಲಾ ಸಮಿತಿಯ ಒಪ್ಪಿಗೆ ಪಡೆದು ಪ್ರಸ್ತಾವನೆಯನ್ನು ಸಲ್ಲಿಸುವುದು.
- **ಖಾಸಗಿ ವಲಯದಡಿ ಸಸ್ಯಾಗಾರ ಸ್ಥಾಪನೆ ಕಾರ್ಯಕ್ರಮವು `Credit linked back ended subsidy` ಆಗಿದ್ದು, ಪ್ರಸಕ್ತ ಸಾಲಿನಲ್ಲಿ RBI ಅನುಮೋದಿತ ರಾಷ್ಟ್ರೀಕೃತ ಬ್ಯಾಂಕ್ ಗಳಿಂದ ದೀರ್ಘಾವಧಿ ಸಾಲ (Term loan) ಮಂಜೂರು ಆಗಿರಬೇಕು. ಬ್ಯಾಂಕ್ ಸಾಲದ ಮೊತ್ತ ಅರ್ಹ ಸಹಾಯಧನಕ್ಕಿಂತ ಹೆಚ್ಚಾಗಿ ಇರಬೇಕು ಮತ್ತು ಈ ಬಗ್ಗೆ ಬ್ಯಾಂಕ್ ವತಿಯಿಂದ ಸಾಲ ಮಂಜೂರಾತಿ ಪತ್ರ. Bank appraisal ವರದಿ ಮತ್ತು ಬ್ಯಾಂಕ್ ಸಾಲದ ಖಾತೆ ಸಂಖ್ಯೆಯನ್ನು ಒದಗಿಸಬೇಕು. ಈ ಉದ್ದೇಶಕ್ಕಾಗಿ ದೀರ್ಘಾವಧಿ ಸಾಲ ಅಲ್ಲದೆ ಬೇರೆ ಬೇರೆ ರೀತಿಯ ಸಾಲಗಳನ್ನು ಪರಿಗಣಿಸುವುದಿಲ್ಲ.**
- ನರ್ಸರಿ ನಿರ್ಮಿಸಲು ತೋಟಗಾರಿಕೆ ಉಪ ನಿರ್ದೇಶಕರ ಕಛೇರಿಯಿಂದ ಫಲಾನುಭವಿಗೆ ನೀಡಿರುವ ಅನುಮತಿ ಪತ್ರವನ್ನು ಲಗತ್ತಿಸಬೇಕು.
- **ಮಾದರಿ ನರ್ಸರಿಯಲ್ಲಿ Mother Plants Block ಕನಿಷ್ಠ ಪ್ರದೇಶ 1 ಹೆಕ್ಟೇರ್ ಇರಬೇಕು ಹಾಗೂ ಸಣ್ಣ ನರ್ಸರಿಯಲ್ಲಿ ಕನಿಷ್ಠ 0.25 ಹೆಕ್ಟೇರ್ ಪ್ರದೇಶ ಇರಬೇಕು.**
- ಪ್ರಸ್ತಾವನೆಯಲ್ಲಿ ಪಾಲಿಹೌಸ್ ಮತ್ತು ನೆರಳು ಪರದೆಯ ವಿನ್ಯಾಸದ ಮಾದರಿಯ ಬಗ್ಗೆ ಸ್ಪಷ್ಟವಾದ ಮಾಹಿತಿಯನ್ನು ನೀಡಬೇಕು. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ಮಾರ್ಗಸೂಚಿಯನ್ವಯ (Guidelines & cost norms) ಸಹಾಯಧನವನ್ನು ಪರಿಗಣಿಸಲಾಗುವುದು.
- ಸಸ್ಯಾಗಾರದಲ್ಲಿ ಪ್ರತಿ ಹೆಕ್ಟೇರ್‌ಗೆ ಹಾಗೂ ಪ್ರತಿ ವರ್ಷಕ್ಕೆ 50,000 ಕಸಿ / ಸಸಿಗಳನ್ನು (NHM Mandated Crops Only) ಉತ್ಪಾದಿಸುವುದು ಕಡ್ಡಾಯವಾಗಿರುತ್ತದೆ. (ಮಾದರಿ ಸಸ್ಯಾಗಾರಗಳಿಂದ 4 ಹೆ.ಗೆ ಕನಿಷ್ಠ 2.00 ಲಕ್ಷ ಗುಣಮಟ್ಟದ ಕಸಿ / ಸಸಿಗಳನ್ನು ಉತ್ಪಾದಿಸಬೇಕು.
- ನರ್ಸರಿ ನಿರ್ಮಾಣಕ್ಕೆ ಕೇಂದ್ರ / ರಾಜ್ಯ ಸರ್ಕಾರದ ಇತರೆ ಯಾವುದೇ ಕಾರ್ಯಕ್ರಮದಡಿ ಸಹಾಯಧನ ಪಡೆದುಕೊಂಡಿರುವುದಿಲ್ಲ ಎಂಬ ಬಗ್ಗೆ ಮುಚ್ಚಳಿಕೆ ಪತ್ರ ನೀಡುವುದು.
- ಇಲಾಖೆಯು ಅನುಷ್ಠಾನಗೊಳಿಸುವ ವಿವಿಧ ಯೋಜನೆಗಳಿಗೆ ಅಗತ್ಯವಿದ್ದಲ್ಲಿ ಇಲಾಖೆ ತಿಳಿಸುವ ರೈತರಿಗೆ ಪ್ರತಿ ವರ್ಷ ನಿಗಧಿಪಡಿಸಿರುವ ದರದಲ್ಲಿ ಸಸ್ಯ ಸಾಮಗ್ರಿಗಳನ್ನು ಮಾರಾಟ ಮಾಡುವ ಬಗ್ಗೆ ಒಡಂಬಡಿಕೆಯನ್ನು ಮಾಡಿಸಿಕೊಳ್ಳತಕ್ಕದ್ದು.
- ಫಲಾನುಭವಿ ನರ್ಸರಿದಾರರು ಈ ಹಿಂದೆ ರಾಜ್ಯ / ಕೇಂದ್ರ ಸರ್ಕಾರದ ಯಾವುದೇ ಯೋಜನೆಯಡಿ ಹಾಗೂ ನರ್ಸರಿಯ ವಿವಿಧ ಮೂಲಭೂತ ಸೌಕರ್ಯಗಳಿಗೂ / ಘಟಕಗಳಿಗೂ ಸಹಾಯಧನ ಪಡೆದಿದ್ದಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿ ಸಹಾಯಧನ ಪಡೆಯಲು ಅರ್ಹರಾಗಿರುವುದಿಲ್ಲ.
- ಹಿಂದಿನ ವರ್ಷಗಳಲ್ಲಿ ನಿರ್ಮಿಸಲಾದ ಸಸ್ಯಾಗಾರದ ಪ್ರಸ್ತಾವನೆಯನ್ನು ಮಂಜೂರಾತಿಗೆ ಸಲ್ಲಿಸಿದಲ್ಲಿ ಅಂತಹ ಪ್ರಸ್ತಾವನೆಗಳನ್ನು ಪರಿಗಣಿಸುವುದಿಲ್ಲ.

- **ಆಸಕ್ತಿಯುಳ್ಳ ರೈತರು ಅರ್ಜಿಯನ್ನು ಚೆಕ್‌ಲಿಸ್ಟ್‌ನಲ್ಲಿರುವಂತೆ ದಾಖಲಾತಿಗಳೊಂದಿಗೆ ತಾಲ್ಲೂಕು ಹಿಸತೋನಿ / ಸತೋನಿ / ಸತೋಅ / ರೈತ ಸಂಪರ್ಕ ಕೇಂದ್ರುರವರ ಕಛೇರಿಗೆ ಅಥವಾ ಆನ್ ಲೈನ್ ಮೂಲಕ FRUITS ತಂತ್ರಾಂಶದಲ್ಲಿ ಸಲ್ಲಿಸುವುದು.**
- ತಾಲ್ಲೂಕು ಹಿಸತೋನಿ/ ಸತೋನಿ ರವರು ಅರ್ಜಿ ಹಾಗೂ ಸಂಬಂಧಿಸಿದ ದಾಖಲಾತಿಗಳನ್ನು ಪರಿಶೀಲಿಸಿ ಅರ್ಹ ಅರ್ಜಿದಾರರ ಹೆಸರುಗಳನ್ನು ಜೇಷ್ಠತಾ ವಹಿಯಲ್ಲಿ ನಮೂದಿಸಿ ಅರ್ಜಿಯನ್ನುತೋಉನಿ (ಜಿಪಂ) ರವರಿಗೆ ಎಲ್ಲಾ ದಾಖಲಾತಿಗಳ ಸಹಿತ ಕಳುಹಿಸುವುದು. ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರು ಜಿಲ್ಲೆಯಲ್ಲಿ ಎಲ್ಲಾ ಹಿಸತೋನಿ / ಸತೋನಿರವರರಿಂದ ಬಂದ ಅರ್ಜಿಗಳನ್ನು ಪರಿಶೀಲಿಸಿ, ತಾಲ್ಲೂಕುವಾರು ಜೇಷ್ಠತಾ ಪಟ್ಟಿಯನ್ನು ಅನುಮೋದಿಸುವುದು.
- ಜಿಲ್ಲೆಯ ತೋಉನಿ (ಜಿಪಂ) ರವರು ಅರ್ಜಿಯನ್ನು ಹಾಗೂ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಅನುಮೋದಿತ ವಾರ್ಷಿಕ ಕ್ರಿಯಾ ಯೋಜನೆಯ ಮಿತಿಯಲ್ಲಿ ಫಲಾನುಭವಿಗೆ work Order / letter of intent ಅನ್ನು 5 ದಿನಗಳೊಳಗಾಗಿ ನೀಡುವುದು.
- ತೋಉನಿ (ಜಿಪಂ) ರವರಿಂದ work order / letter of indent ಪಡೆದ ನಂತರ ರೈತರು ಸದರಿ ಯೋಜನೆಯನ್ನು 90 ದಿವಸಗಳ ಅವಧಿಯಲ್ಲಿ ಪೂರ್ಣಗೊಳಿಸಬೇಕು.
- ಸಹಾಯಕ ತೋಟಗಾರಿಕೆ ಅಧಿಕಾರಿ (RSK) ರವರಿಗೆ ಅಗತ್ಯ ದಾಖಲಾತಿಗಳೊಂದಿಗೆ ಪ್ರಸ್ತಾವನೆ ಸಲ್ಲಿಸುವುದು. ಸಂಬಂಧಿಸಿದ ಸಹಾಯಕ ತೋಟಗಾರಿಕೆ ಅಧಿಕಾರಿ (RSK) ರವರು ಫಲಾನುಭವಿಯೊಂದಿಗೆ ಉದ್ದೇಶಿತ ಸಸ್ಯಾಗಾರವನ್ನು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿ ಯೋಜನೆಯ ಅನುಷ್ಠಾನದ ಗುಣಮಟ್ಟ ಹಾಗೂ ಮೂಲಭೂತ ಸೌಕರ್ಯಗಳನ್ನು ಅಳವಡಿಸಿದ ಬಗ್ಗೆ ಹಾಗೂ ಅದರ ಸೂಕ್ತತೆ ಬಗ್ಗೆ ಅನುಷ್ಠಾನದ ವಿವರ ಹಾಗೂ ಫಲಾನುಭವಿಯ ಸಮೇತ ತೆಗೆದ ಛಾಯಾಚಿತ್ರ ಹಾಗೂ ವರದಿಯನ್ನು ಸತೋಅ (RSK) ಹಾಗೂ ಹಿಸತೋನಿ ರವರ ದೃಢೀಕರಣದೊಂದಿಗೆ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರಿಗೆ ಸಲ್ಲಿಸುವುದು.
- ಸಹಾಯಕ ತೋಟಗಾರಿಕೆ ಅಧಿಕಾರಿ (RSK) ರವರು ಕಡ್ಡಾಯವಾಗಿ (ಶೇ.100 ರಷ್ಟು) ಎಲ್ಲಾ ತಾಕುಗಳ ಪರಿಶೀಲನೆ ನಡೆಸಬೇಕು.
- ಸತೋಅ (RSK) ರವರು ಪರಿಶೀಲಿಸಿದ ತಾಕುಗಳ ಪೈಕಿ ಕನಿಷ್ಠ ಶೇ.75 ರಷ್ಟು ತಾಕುಗಳನ್ನು ತಾಲ್ಲೂಕು ಹಿಸತೋನಿ / ಸತೋನಿ ರವರು ಪರಿಶೀಲಿಸಬೇಕು. ಸತೋಅ (RSK) ರವರು ನಡೆಸಿರುವ ಪರಿಶೀಲನೆಯಲ್ಲಿ ಯಾವುದಾದರು ನ್ಯೂನ್ಯತೆಗಳಿದ್ದರೆ ಅರ್ಜಿಯನ್ನು ತಿರಸ್ಕರಿಸುವುದಲ್ಲದೇ ಅವರನ್ನೇ ನೇರ ಜವಾಬ್ದಾರರನ್ನಾಗಿ ಮಾಡುವುದು.
- **ಜಿಲ್ಲೆಯ ತೋಉನಿ (ಜಿಪಂ) ರವರು ಶೇ.10 ರಷ್ಟು ತಾಕುಗಳ ಪರಿಶೀಲನೆ ಕಡ್ಡಾಯವಾಗಿ ಮಾಡುವುದು. ಅದರಲ್ಲಿ ಹಿಸತೋನಿ / ಸತೋನಿ ರವರು ಪರಿಶೀಲಿಸಿರುವ ಶೇ. 5 ರಷ್ಟು ತಾಕುಗಳನ್ನು ಹಾಗೂ ಸತೋಅ ರವರು ಪರಿಶೀಲಿಸಿರುವ ಶೇ. 5 ರಷ್ಟು ತಾಕುಗಳನ್ನು ಮರುಪರಿಶೀಲನೆ ಮಾಡುವುದು.**
- ಹಿಸತೋನಿ / ಸತೋನಿ ರವರು ಪರಿಶೀಲಿಸಿರುವ ಅರ್ಜಿಗಳಲ್ಲಿ ಯಾವುದಾದರು ನ್ಯೂನ್ಯತೆಗಳಿದ್ದರೆ ಹಿಸತೋನಿ / ಸತೋನಿ ರವರನ್ನು ಜವಾಬ್ದಾರರನ್ನಾಗಿ ಮಾಡಿ ನಿರ್ದೇಶನಾಲಯಕ್ಕೆ ವರದಿ ಸಲ್ಲಿಸುವುದು.

* **ವಿಭಾಗೀಯ ಜಂಟಿ ನಿರ್ದೇಶಕರು ರವರು ಶೇ. 5 ರಷ್ಟು ತಾಕುಗಳ ಪರಿಶೀಲನೆ ಕಡ್ಡಾಯವಾಗಿ ಮಾಡುವುದು. ಆದರಲ್ಲಿ ತೋಉನಿ (ಜಿಪಂ) ರವರು ಪರಿಶೀಲಿಸಿರುವ ಶೇ. 2 ರಷ್ಟು ತಾಕುಗಳನ್ನು ಹಾಗೂ ಹಿಸತೋನಿ / ಸತೋನಿ ರವರು ಪರಿಶೀಲಿಸಿರುವ ಶೇ. 3 ರಷ್ಟು ತಾಕುಗಳನ್ನು ಮರುಪರಿಶೀಲನೆ ಮಾಡುವುದು.**
* **ಅಪರ ನಿರ್ದೇಶಕರು/ ಜಂಟಿ ನಿರ್ದೇಶಕರು ರವರು ಶೇ.1 ರಷ್ಟು ತಾಕುಗಳ ಪರಿಶೀಲನೆ ಕಡ್ಡಾಯವಾಗಿ ಮಾಡುವುದು. ಆದರಲ್ಲಿ ವಿಭಾಗೀಯ ಜಂಟಿ ನಿರ್ದೇಶಕರು ಪರಿಶೀಲಿಸಿರುವ ಶೇ.0.5 ರಷ್ಟು ತಾಕುಗಳನ್ನು ಹಾಗೂ ತೋಉನಿ (ಜಿಪಂ) ರವರು ಪರಿಶೀಲಿಸಿರುವ ಶೇ.0.5 ರಷ್ಟು ತಾಕುಗಳನ್ನು ಮರುಪರಿಶೀಲನೆ ಮಾಡುವುದು.**

ಮೇಲಿನ ಎಲ್ಲಾ ಅಧಿಕಾರಿಗಳು ತಮ್ಮ ಸ್ಥಳ ಪರಿಶೀಲನೆ ಸಮಯದಲ್ಲಿ ಕಡ್ಡಾಯವಾಗಿ GPS Enabled Photos ಅನ್ನು ತೆಗೆದು ಇಲಾಖಾ website ನಲ್ಲಿ upload ಮಾಡುವುದು.

**Geo Tagged ಛಾಯಾಚಿತ್ರಗಳನ್ನು ಆಧರಿಸಿ ಕಾರ್ಯಾನಂತರ ತಾಕುಗಳ ಪರಿಶೀಲನೆಯನ್ನು ನಿಖರವಾಗಿ ಕೈಗೊಳ್ಳಲು ಕ್ರಮವಹಿಸುವುದು.**

4. **ತಾಂತ್ರಿಕ ಪರಿಶೀಲನಾ ಕ್ರಮಗಳು :-**

ಉದ್ದೇಶಿತ ಸಸ್ಯಾಗಾರ ಸ್ಥಾಪನೆಯ ನಂತರ ಪ್ರಸ್ತಾವನೆಯಲ್ಲಿರುವ ಅಂಶಗಳ ಬಗ್ಗೆ ಪರಿಶೀಲಿಸುವುದು. ಸಸ್ಯಾಗಾರದಲ್ಲಿ ಉತ್ಪಾದಿಸುವ ಕಸಿ / ಸಸಿ ಗಿಡಗಳ ಗುಣಮಟ್ಟ ಪರೀಕ್ಷಿಸಲು ಸಹಾಯಧನ ಪಡೆದ 6 ತಿಂಗಳ ಒಳಗಾಗಿ ಕಡ್ಡಾಯವಾಗಿ NHB Accreditation & Rating ಮಾಡಿಸಿಕೊಳ್ಳಲು ಫಲಾನುಭವಿಗಳು ಕ್ರಮವಹಿಸುವುದು.

5. **<u>ಆರ್ಥಿಕ ಪ್ರತ್ಯಾ ಯೋಜನೆ (Delegation of Power)</u>**

ಈ ಕಾರ್ಯಕ್ರಮದಲ್ಲಿ ಮಾರ್ಗಸೂಚಿಯಂತೆ ಸಹಾಯಧನ ಮಂಜೂರು ಮಾಡಲು ಸರ್ಕಾರದ ಆದೇಶ ಸಂಖ್ಯೆ: ಎಫ್ ಡಿ-3ಟಿಎಫ್ ಪಿ2018 ದಿನಾಂಕ:14.5.2018ರ ರನ್ವಯ ಕಾಲ ಕಾಲಕ್ಕೆ ಪರಿಷ್ಕೃತವಾಗುವ ಪ್ರದತ್ತವಾದ ಆರ್ಥಿಕ ಪ್ರತ್ಯಾಧಿಕಾರವನ್ನು ಅನುಸರಿಸುವುದು ಹಾಗೂ ಆರ್ಥಿಕ ಇಲಾಖೆಯ ಆರ್ಥಿಕ ಪ್ರತ್ಯಾಯೋಜನೆಯ ಮಾರ್ಗಸೂಚಿಯನ್ನು ಪಾಲಿಸುವುದು.

**KSHMA ಕಛೇರಿಗೆ ಪ್ರಸ್ತಾವನೆಯನ್ನು ಸಲ್ಲಿಸುವ ಮುನ್ನ ಕಡ್ಡಾಯವಾಗಿ ಚೆಕ್‌ಲಿಸ್ಟ್‌ನಲ್ಲಿ ಇರುವಂತೆ ದಾಖಲಾತಿಗಳನ್ನು ಪರಿಶೀಲಿಸಿ ಅರ್ಹತೆ ಇದ್ದಲ್ಲಿ ಮಾತ್ರ ಮಂಜೂರಾತಿಗೆ ಸಲ್ಲಿಸಲು ತಿಳಿಸಿದೆ.**

6. **ಸಹಾಯಧನದ ವಿತರಣೆ:**

* ನಿರ್ದೇಶನಾಲಯದಿಂದ ಮಂಜೂರಾತಿ ಆದೇಶ ದೊರಕಿದ ನಂತರ, ಜಿಲ್ಲೆಯ ತೋಉನಿ (ಜಿಪಂ) ರವರು ಎಲ್ಲಾ ದಾಖಲೆಗಳನ್ನು ಹಾಗೂ ಹಿಸತೋನಿ ನೀಡಿರುವ ಅನುಷ್ಠಾನದ ವರದಿಯನ್ನು ಪರಿಶೀಲಿಸಿದ ನಂತರ ಕೆಲಸವು ತೃಪ್ತಿಕರವಾಗಿದ್ದಲ್ಲಿ ಮಾತ್ರ ಸಹಾಯಧನದ ಮೊತ್ತವನ್ನು ಬಿಡುಗಡೆ ಮಾಡುವುದು.
* **ನರ್ಸರಿ ಕಾಮಗಾರಿ ಪೂರ್ಣಗೊಂಡಿರುವ ಬಗ್ಗೆ ಸಂಬಂಧಿಸಿದ ರೈತ ಸಂಪರ್ಕ ಕೇಂದ್ರದ ಅಧಿಕಾರಿ, ತಾಲ್ಲೂಕು ಅಧಿಕಾರಿಯವರು ಹಾಗೂ ಜಿಲ್ಲಾ ತೋಟಗಾರಿಕೆ ಉಪ ನಿರ್ದೇಶಕರು ಮತ್ತು ಬ್ಯಾಂಕಿನ ಮ್ಯಾನೇಜರ್‌ರವರನ್ನು ಒಳಗೊಂಡ ಜಿಲ್ಲಾ ಸಮಿತಿಯೊಂದಿಗೆ ಜಂಟಿಯಾಗಿ ಸ್ಥಳ ಪರಿಶೀಲನೆ ಮಾಡಿ, ಕಾಮಗಾರಿ (infrastructure) ಪೂರ್ಣಗೊಂಡಿರುವ ಬಗ್ಗೆ ಖಾತರಿ ಪಡಿಸಿಕೊಳ್ಳುವುದು ಹಾಗೂ ಪೂರ್ಣಗೊಂಡಿರುವ ಕಾಮಗಾರಿಗಳ**

ಛಾಯಾಚಿತ್ರಗಳನ್ನು ಪಡೆದುಕೊಂಡ ನಂತರವೇ ಅಂತಿಮ ಸಹಾಯಧನವನ್ನು ಬಿಡುಗಡೆ ಮಾಡುವುದು ಕಡ್ಡಾಯವಾಗಿರುತ್ತದೆ.

- ಫಲಾನುಭವಿಯು ನರ್ಸರಿ ಸ್ಥಾಪನೆ ಸಲುವಾಗಿ ತೆಗೆದುಕೊಂಡಿರುವ Term Loan ಬ್ಯಾಂಕ್ ಖಾತೆಗೆ ನಿಯಾಮಾನುಸಾರ ಮಾರ್ಗಸೂಚಿಗಳನ್ನು ಪಾಲಿಸಿಕೊಂಡು NEFT / ECS ಮುಖಾಂತರ ಜಮಾ ಆಗುವಂತೆ ಸಹಾಯಧನ ನೀಡಲು ಕ್ರಮವಹಿಸುವುದು.
- ನರ್ಸರಿಯಲ್ಲಿ ಇಲಾಖೆಯ ಹಾಗೂ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ LOGO ನೊಂದಿಗೆ ಸಹಾಯಧನವನ್ನು ಪಡೆದಿರುವ ಬಗ್ಗೆ ವಿವರಗಳನ್ನು ಒಳಗೊಂಡಂತೆ ನಾಮಫಲಕವನ್ನು ಬರೆಸಬೇಕು.

7. ಅನುಷ್ಠಾನ ವೇಳಾಪಟ್ಟಿ:

- ನರ್ಸರಿ ಕಾರ್ಯಕ್ರಮವನ್ನು ಹಾಲಿ ಆರ್ಥಿಕ ವರ್ಷದ ಅಂತ್ಯದೊಳಗಾಗಿ ಮುಕ್ತಾಯ ಮಾಡಿ ಸಹಾಯಧನ ಪಾವತಿಸಬೇಕು. ಇಲ್ಲದಿದ್ದಲ್ಲಿ, ಮಂಜೂರಾತಿ ಆದೇಶವು ತನ್ನಿಂದ ತಾನೇ ರದ್ದಾಗುತ್ತದೆ, ಯಾವುದೇ ಕಾರಣಕ್ಕೂ ಮುಂದಿನ ಆರ್ಥಿಕ ವರ್ಷದಲ್ಲಿ ನರ್ಸರಿ ಕಾರ್ಯಕ್ರಮಕ್ಕೆ ಅನುದಾನ ಬಿಡುಗಡೆ ಮಾಡಲು ಅವಕಾಶವಿರುವುದಿಲ್ಲ.

8. ವರದಿ ಮಾಡುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು (Reporting and documentation)

**ವಾರ್ಷಿಕ ಬಿಡುಗಡೆಯಾಗಿರುವ ಅನುದಾನವನ್ನು ಸಂಪೂರ್ಣವಾಗಿ ವೆಚ್ಚ ಭರಿಸಲು ಕ್ರಮಕೈಗೊಳ್ಳುವುದು. ಅನುದಾನವನ್ನು ಸಂಪೂರ್ಣವಾಗಿ ವೆಚ್ಚ ಭರಿಸಲು ಸಾಧ್ಯವಾಗದಿದ್ದಲ್ಲಿ 3ನೇ ತ್ರೈಮಾಸಿಕದ (3rd trimester) ಒಳಗಾಗಿ ಅನುದಾನದ ಬೇಡಿಕೆಯನ್ವಯ ಅಂತರ ಘಟಕಗಳಲ್ಲಿ ಮಾರ್ಪಾಡುಗಳನ್ನು ನಿರ್ದೇಶನಾಲಯದಿಂದ ಅನುಮೋದನೆ ಪಡೆಯುವುದು. ತದನಂತರ ಯಾವುದೇ ಮಾರ್ಪಾಡುಗಳನ್ನು ಪರಿಗಣಿಸಲಾಗುವುದಿಲ್ಲ.**

ಅಂತಿಮ ಪ್ರಗತಿ ವರದಿ, ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದ ಆಗಿರುವ ಪ್ರಯೋಜನಗಳನ್ನು (ಲಿಖಿತ, ದೃಶ್ಯ ಮತ್ತು ಶ್ರವಣ) ದಾಖಲಿಸಿ ಇವುಗಳ ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿಯನ್ನು ಕ.ರಾ.ತೋ.ಮಿ.ವಿ. ಬೆಂಗಳೂರು ಮತ್ತು ತೋಟಗಾರಿಕೆ ಉಪ ನಿರ್ದೇಶಕರು (ತೋಟಗಾರಿಕೆ ಮಾಹಿತಿ ಕೇಂದ್ರ) ರವರಿಗೆ ಕಳುಹಿಸುವುದು. **2022-23 ನೇ ಸಾಲಿನ ಮಾರ್ಚ್ ಮಾಹೆಯ ಅಂತ್ಯಕ್ಕೆ ಫಲಾನುಭವಿಗಳ ವಿವರವನ್ನು ಕಡ್ಡಾಯವಾಗಿ KSHMA ಕಛೇರಿಗೆ ಕಳುಹಿಸುವುದು.**

ಮುಂದಿನ ಆದೇಶದವರೆಗೂ ಈ ಮಾರ್ಗಸೂಚಿಯು ಚಾಲ್ತಿಯಲ್ಲಿರುತ್ತದೆ.

Nagashree

**ಮಿಷನ್ ನಿರ್ದೇಶಕರು**

**ಮತ್ತು**

**ತೋಟಗಾರಿಕೆ ನಿರ್ದೇಶಕರು**

## ಖಾಸಗಿ ವಲಯದಡಿ ಸಸ್ಯಾಗಾರದ ಸ್ಥಾಪನೆ ಕಾರ್ಯಕ್ರಮದ ಚೆಕ್‌ಲಿಸ್ಟ್

| | | |
|---|---|---|
| 1 | MIDH ಯೋಜನೆಯ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಉಪ ಯೋಜನೆಯ ನಿಗಧಿತ ನಮೂನೆಯಲ್ಲಿ ಫಲಾನುಭವಿಯು ಅರ್ಜಿ | ಹೌದು / ಇಲ್ಲ |
| 2 | ಫಲಾನುಭವಿಗೆ ಮಾರ್ಗಸೂಚಿಯ ಪ್ರಕಾರ ಇರಬೇಕಾದ ಜಮೀನು ಹೊಂದಿದ್ದಾರೆಯೇ?<br>ಮಾದರಿ ಸಸ್ಯಾಗಾರ-ಗರಿಷ್ಠ 4ಹೆಕ್ಟೇರ್<br>ಸಣ್ಣ ಸಸ್ಯಾಗಾರ-ಕನಿಷ್ಠ 1 ಹೆಕ್ಟೇರ್ | |
| 3 | ಫಲಾನುಭವಿಯೂ ತನ್ನ ಹೆಸರಿನಲ್ಲಿ ಹೊಂದಿರುವ ಜಮೀನಿನ ಪಹಣಿ ನೀಡಿರುತ್ತಾರೆಯೇ? ಸರ್ವೇ ನಂ. | |
| 4 | ಫಲಾನುಭವಿಯು ತನ್ನ ಕುಟುಂಬದ ಇತರೆ ಸದಸ್ಯರ ಹೆಸರಿನಲ್ಲಿರುವ ಪಹಣಿ ನೀಡಿದ್ದಲ್ಲಿ ಅಥವಾ ಜಂಟಿ ಖಾತೆ ಇದ್ದಲ್ಲಿ ಕುಟುಂಬದವರ ಒಪ್ಪಿಗೆ / ಅಫೀಡವಿಟ್ ನೀಡಿರುವರೇ? | |
| 5 | ಯೋಜನಾ ಪ್ರಸ್ತಾವನೆಯ ವಿವರಗಳು ಮತ್ತು ಘಟಕವಾರು ವೆಚ್ಚದ ವಿವರಗಳು: | |
| 6 | ತೋಉನಿ (ಜಿಪಂ) ರವರರಿಂದ ಅನುಮತಿ ಪತ್ರ ಪಡೆದಿರುತ್ತಾರೆಯೇ? | |
| 7 | ನರ್ಸರಿ ಸ್ಥಾಪನೆ ಪ್ರಸ್ತಾವನೆಯಲ್ಲಿ ಕೆಳಕಂಡ ಸೌಕರ್ಯಗಳನ್ನು ಅಂದಾಜು ಪಟ್ಟಿಯಲ್ಲಿ ಸೇರಿಸಲಾಗಿದೆಯೇ<br>ಭೂಮಿ ಅಭಿವೃದ್ಧಿ, ಬೇಲಿ, ತಾಯಿ ಗಿಡಗಳ ತಾಕು, ಪಾಲಿಹೌಸ್, ನೆರಳು ಪರದೆ, ನೀರಿನ ಸೌಕರ್ಯ, ಎರೆಹುಳು ಗೊಬ್ಬರ ಘಟಕ/ ಬಯೋಡೈಜೆಸ್ಟರ್ / ಮೀಡಿಯ ಮಿಕ್ಸಿಂಗ್ ಯೂನಿಟ್, ನೀರು ಸಂಗ್ರಹಣಾ ಟ್ಯಾಂಕ್, ಸ್ಟೋರ್ ರೂಂ, ಪವರ್ ಮೆಷಿನ್, ಉಪಕರಣಗಳು / ಸಲಕರಣೆಗಳು. | |
| 8 | ವಿವರವಾದ ಅಂದಾಜು ಪಟ್ಟಿ, cost benefit ratio work sheet ನ್ನು ಅನುಬಂಧಿಸಿದೆಯೇ? | |
| 9 | ಉದ್ದೇಶಿತ ಸಸ್ಯಾಗಾರದ Lay out plan ಲಗತ್ತಿಸಿದ್ದಾರೆಯೇ? | |
| 10 | ಫಲಾನುಭವಿಯು ನರ್ಸರಿ ಸ್ಥಾಪನೆಗಾಗಿ ಬ್ಯಾಂಕ್‌ನಿಂದ ಸಾಲ ಪಡೆದಿದ್ದಾರೆಯೇ?<br>i ಸಾಲ ಪಡೆದಿರುವ ಬ್ಯಾಂಕ್ ಹೆಸರು ಮತ್ತು ವಿಳಾಸ<br>ii. ಬ್ಯಾಂಕ್ ಸಾಲದ ಮೊತ್ತ<br>iii.ಬ್ಯಾಂಕ್ ಸಾಲ ಮಂಜೂರಾತಿ ಪತ್ರ ಹಾಗೂ ಹಾಗೂ Appraisal ವರದಿ ಲಗತ್ತಿಸಿದ್ದಾರೆಯೇ ? | |
| 11 | ಫಲಾನುಭವಿಯು ರಾಜ್ಯ / ಕೇಂದ್ರ ಸರ್ಕಾರದಿಂದ ಇದೇ ಕಾರ್ಯಕ್ರಮಕ್ಕೆ ಈ ಮೊದಲು ಸಹಾಯಧನ ಪಡೆದಿರುವುದಿಲ್ಲವೆಂಬ ಬಗ್ಗೆ ನೋಟರಿ / ಮುಚ್ಚಳಿಕೆ ಪತ್ರ ಲಗತ್ತಿಸಿರುವರೇ? | |

219

| | | |
|---|---|---|
| 12 | ಘಟಕದ ಛಾಯಚಿತ್ರವನ್ನು ಲಗತ್ತಿಸಿದ್ದಾರೆಯೇ? | |
| 13 | ತಾಲ್ಲೂಕು ಅಧಿಕಾರಿಗಳ ಪರಿಶೀಲನಾ ಸಮಿತಿ ದೃಢೀಕರಣ ಲಗತ್ತಿಸಿದ್ದಾರೆಯೇ | |
| 14 | ಸದರಿ ಘಟಕಕ್ಕೆ ಸಹಾಯಧನ ನೀಡಲು ತೋಟಗಾರಿಕೆ ಉಪ ನಿರ್ದೇಶಕರು ಶಿಫಾರಸ್ಸು ಮಾಡಿರುತ್ತಾರೆಯೇ? ಮಾಡಿದ್ದಲ್ಲಿ ಶಿಫಾರಸ್ಸು ಮಾಡಿರುವ ಸಹಾಯಧನದ ಮೊತ್ತ | |
| 15 | ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಗುರಿ ನಿಗಧಿಪಡಿಸಲಾಗಿದೆಯೇ? | |

## ಸಾರ್ವಜನಿಕ ವಲಯದಡಿ ಸಸ್ಯಾಗಾರದ ಸ್ಥಾಪನೆ ಕಾರ್ಯಕ್ರಮದ ಚೆಕ್‌ಲಿಸ್ಟ್

| | | | |
|---|---|---|---|
| 1 | ಪ್ರಸ್ತಾವನೆ ಸಲ್ಲಿಸಿರುವ ವಿಜ್ಞಾನಿ / ಅಧಿಕಾರಿ / ಸಂಸ್ಥೆಯ ಹೆಸರು ಮತ್ತು ವಿಳಾಸ | : | |
| 2 | 2022-23 ನೇ ಸಾಲಿನ MIDH ನ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಉಪ ಯೋಜನೆಯ ನಿಗಧಿತ ನಮೂನೆಯಲ್ಲಿ ಫಲಾನುಭವಿಯು ಅರ್ಜಿ ಲಗತ್ತಿಸಿದ್ದಾರೆಯೇ? | : | ಹೌದು/ಇಲ್ಲ |
| 3 | ಫಲಾನುಭವಿ ಮಾರ್ಗಸೂಚಿಯ ಪ್ರಕಾರ ಇರಬೇಕಾದ ಜಮೀನು ಹೊಂದಿದ್ದಾರೆಯೇ?<br>ಮಾದರಿ ಸಸ್ಯಾಗಾರ-ಗರಿಷ್ಠ 4 ಹೆಕ್ಟೇರ್<br>ಸಣ್ಣ ಸಸ್ಯಾಗಾರ-ಕನಿಷ್ಠ 1 ಹೆಕ್ಟೇರ್ | : | ಹೌದು/ಇಲ್ಲ |
| 5 | ಯೋಜನಾ ಪ್ರಸ್ತಾವನೆಯ ಮೊತ್ತ | : | |
| 6 | ನರ್ಸರಿ ಸ್ಥಾಪನೆ ಪ್ರಸ್ತಾವನೆಯಲ್ಲಿ ಕೆಳಕಂಡ ಸೌಕರ್ಯಗಳನ್ನು ಅಂದಾಜು ಪಟ್ಟಿಯಲ್ಲಿ ಸೇರಿಸಲಾಗಿದೆಯೇ?<br>ಭೂಮಿ ಅಭಿವೃದ್ಧಿ, ಬೇಲಿ, ತಾಯಿ ಗಿಡಗಳ ತಾಕು, ಪಾಲಿಹೌಸ್, ನೆರಳು ಪರದೆ, ನೀರಿನ ಸೌಕರ್ಯ, ಎರೆಹುಳು ಗೊಬ್ಬರ ಘಟಕ/ ಬಯೋಡೈಜೆಸ್ಟರ್/ ಯೂರಿಯಾ ಮಿಕ್ಸಿಂಗ್ ಯೂನಿಟ್, ನೀರು ಸಂಗ್ರಹಣಾ ಟ್ಯಾಂಕ್, ಸ್ಟೋರ್ ರೂಂ, ಪವರ್ ಮೆಷಿನ್, ಉಪಕರಣಗಳು / ಸಲಕರಣೆಗಳು. | : | ಹೌದು/ಇಲ್ಲ |
| 7 | ವಿವರವಾದ ಅಂದಾಜುಪಟ್ಟಿ, cost benefit ratio work sheet ನ್ನು ಅನುಬಂಧಿಸಿದೆಯೇ? | : | ಹೌದು/ಇಲ್ಲ |
| 8 | ಉದ್ದೇಶಿತ ಸಸ್ಯಾಗಾರದ Lay out plan ಲಗತ್ತಿಸಿದ್ದಾರೆಯೇ? | : | ಹೌದು/ಇಲ್ಲ |
| 8 | ಘಟಕದ ಛಾಯಚಿತ್ರ ಲಗತ್ತಿಸಿದ್ದಾರೆಯೇ? | : | ಹೌದು/ಇಲ್ಲ |
| 9 | ತಾಲ್ಲೂಕು ಅಧಿಕಾರಿಗಳ ಪರಿಶೀಲನಾ ಸಮಿತಿ ದೃಢೀಕರಣ ಲಗತ್ತಿಸಿದ್ದಾರೆಯೇ | : | ಹೌದು/ಇಲ್ಲ |
| 10 | ಸದರಿ ಘಟಕಕ್ಕೆ ಸಹಾಯಧನ ನೀಡಲು ತೋಟಗಾರಿಕೆ ಉಪ ನಿರ್ದೇಶಕರು ಶಿಫಾರಸ್ಸು ಮಾಡಿರುತ್ತಾರೆಯೇ? ಮಾಡಿದ್ದಲ್ಲಿ ಶಿಫಾರಸ್ಸು ಮಾಡಿರುವ ಸಹಾಯಧನದ ಮೊತ್ತ | : | ಹೌದು/ಇಲ್ಲ |
| 11 | ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಗುರಿ ನಿಗಧಿಪಡಿಸಲಾಗಿದೆಯೇ? | : | ಹೌದು/ಇಲ್ಲ |
| 12 | ಪ್ರಸ್ತಾವನೆಯಲ್ಲಿ ನಮೂದಿಸಿರುವ ಘಟಕವಾರು ವೆಚ್ಚದ ವಿವರಗಳು | : | |